ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿಗಳು) :

ಅ) ಆರ್ಥಿಕ ಮಿತವ್ಯಯ ಆದೇಶವು ದಿ .10.11.87 ರಿಂದ ಜಾರಿಗೆ ಬಂದಿದ್ದು, ಈಗಲೂ ಸಹ ಜಾರಿಯಲ್ಲಿದೆ. ಇದು ಅಭಿವೃದ್ಧಿಯೇತರ ಖರ್ಚುಗಳನ್ನು ಹತೋಟಿಯಲ್ಲಿಡಲು ಮಾಡಲಾಗಿದೆ.

ಆ) ಆರ್ಥಿಕ ಮಿತವ್ಯಯ ಆದೇಶವು ಎಲ್ಲಾ ಇಲಾಖೆಗಳಲ್ಲಿ ಜಾರಿಯಲ್ಲಿದೆ.

ಆದರೆ ಈ ಕೆಳಗೆ ನಮೂದಿಸಿರುವ ಇಲಾಖೆಗಳಲ್ಲಿ ಮಿತವ್ಯಯ ಆದೇಶವನ್ನು ಸಡಿಲಿಸಿ ಕೆಲವೊಂದು ಅತ್ಯಾವಶ್ಯಕ ಹುದ್ದೆಗಳನ್ನು ತುಂಬಲು ಅನುಮತಿ ನೀಡಲಾಗಿದೆ.

1. ಶಿಕ್ಷಣ ಇಲಾಖೆ
2. ಕಂದಾಯ ಇಲಾಖೆ
3. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
4. ಪಶು ಸಂಗೋಪನೆ, ಮೀನುಗಾರಿಕೆ ಇಲಾಖೆ
5. ಅರಣ್ಯ ಇಲಾಖೆ
6. ಸಮಾಜ ಕಲ್ಯಾಣ ಇಲಾಖೆ
7. ಕಾರ್ಮಿಕ ಇಲಾಖೆ.

ಇ) ಇಲ್ಲ. ಆದರೆ ಆಡಳಿತ ಇಲಾಖೆಯು ಈ ಬಗ್ಗೆ ಸಲ್ಲಿಸಿರುವ ಈ ಪ್ರಸ್ತಾವನೆಯಲ್ಲಿ 1116 ಬೋಧಕೇತರ ಹುದ್ದೆಗಳಿದ್ದು, ಸದರಿ ಹುದ್ದೆಗಳಿಗೆ ತಗಲುವ ರೂ.333.00 ಲಕ್ಷಗಳನ್ನು ಯೋಜನೆಯಲ್ಲಿ ಹೆಚ್ಚುವರಿಯಾಗಿ ಒದಗಿಸಲು ಆಡಳಿತ ಇಲಾಖೆಯು ಕೋರಿರುವುದರಿಂದ ಸದರಿ ಪ್ರಸ್ತಾವನೆಯನ್ನು ಸಚಿವ ಸಂಪುಟದ ಉಪ ಸಮಿತಿಯ ಮುಂದೆ ಮಂಡಿಸುವಂತೆ ಆಡಳಿತ ಇಲಾಖೆಗೆ ತಿಳಿಸಲಾಗಿದೆ.

ತುಮಕೂರು ಜಿಲ್ಲೆಯಲ್ಲಿ ರಸ್ತೆ ದುರಸ್ಥಿ

2251 - ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಇತ್ತೀಚಿನ ಮಳೆಯಿಂದಾಗಿ ತುಮಕೂರು ಜಿಲ್ಲೆ ಹಾಗಲವಾಡಿ-ಗಳಿಗೆಕೆರೆ ಮತ್ತು ಹಾಗಲವಾಡಿ ಬುಕ್ಕಾಪಟ್ಟಣ ರಸ್ತೆಗಳು ವಾಹನ ಸಂಚಾರಕ್ಕೆ ಯೋಗ್ಯವಾಗಿಲ್ಲ, ತುಂಬಾ ಹದಗೆಟ್ಟಿದ್ದು ಸಾರಿಗೆ ಸಂಚಾರಕ್ಕೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಆ) ಹಾಗಿದ್ದಲ್ಲಿ ಈ ರಸ್ತೆಗಳನ್ನು ದುರಸ್ತಿಪಡಿಸಬೇಕಾಗುವ ಅಂದಾಜು ಹಣವೆಷ್ಟು ?

ಇ) ಈ ಬಗ್ಗೆ ತಕ್ಷಣ ಹಣ ಮಂಜೂರಾತಿಗೆ ಕ್ರಮ ಕೈಗೊಳ್ಳಲಾಗುವುದೇ ?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಮಳೆಯಿಂದ ರಸ್ತೆಯ ಹಲವು ಭಾಗಗಳು ಹದಗೆಟ್ಟಿರುವುದು ಗಮನಕ್ಕೆ ಬಂದಿರುತ್ತದೆ.

ಆ) ಈ ಎರಡೂ ರಸ್ತೆಗಳನ್ನು ದುರಸ್ತಿಗೊಳಿಸಲು ಒಟ್ಟು ರೂ. 30.50 ಲಕ್ಷಗಳು ಅಂದಾಜಿಸಲಾಗಿದೆ.

ಇ) ಮಳೆ ಹಾನಿ ಪರಿಹಾರ ಕಾರ್ಯಕ್ರಮದಡಿ ಈ ರಸ್ತೆಗಳ ದುರಸ್ತಿಗೆ ಪ್ರಸ್ತಾವಿಸಿದ್ದು ಅನುದಾನದ ಲಭ್ಯತೆಯ ಮೇರೆಗೆ ದುರಸ್ತಿ ಕೈಗೊಳ್ಳಲಾಗುವುದು.

ರಾಜ್ಯದಲ್ಲಿ ಮಂಜೂರಾಗಿರುವ ರಂಗಮಂದಿರಗಳು

2252 - ಶ್ರೀ ಕೆ. ಜಯರಾಮ ಶೆಟ್ಟಿ (ಉಳ್ಳಾಲ) : ಮಾನ್ಯ ಪ್ರವಾಸೋದ್ಯಮ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *1997-98ನೇ ಸಾಲಿನಲ್ಲಿ ರಾಜ್ಯದಲ್ಲಿ ಮಂಜೂರಾಗಿರುವ ಬಯಲು ರಂಗ ಮಂದಿರಗಳ ಸಂಖ್ಯೆ ಎಷ್ಟು? (ಜಿಲ್ಲಾವಾರು ಮಾಹಿತಿ ನೀಡುವುದು)*

ಆ) *ಇದಕ್ಕಾಗಿ ಕಾದಿರಿಸಿದ ಮೊಬಲಗೆಷ್ಟು?*

ಇ) *1996-97ನೇ ಸಾಲಿನಲ್ಲಿ ಪೂರ್ಣಗೊಳ್ಳದಿರುವ ಬಯಲು ರಂಗ ಮಂದಿರಗಳು ಎಷ್ಟು? ಇದನ್ನು ಯಾವಾಗ ಪೂರ್ಣಗೊಳಿಸಲಾಗುವುದು?*

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಪ್ರವಾಸೋದ್ಯಮ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವೆಯರು) :

ಅ)

1.	ಬೆಂಗಳೂರು ನಗರ ಜಿಲ್ಲೆ	1
2.	ತುಮಕೂರು ಜಿಲ್ಲೆ	1
3.	ಕೋಲಾರ ಜಿಲ್ಲೆ	2
4.	ದಾವಣಗೆರೆ ಜಿಲ್ಲೆ	2
5.	ಮೈಸೂರು ಜಿಲ್ಲೆ	1
6.	ಚಾಮರಾಜನಗರ ಜಿಲ್ಲೆ	1
7.	ಮಂಡ್ಯ ಜಿಲ್ಲೆ	3
8.	ಹಾಸನ ಜಿಲ್ಲೆ	1
9.	ಉಡುಪಿ ಜಿಲ್ಲೆ	2
10.	ಬೆಳಗಾವಿ ಜಿಲ್ಲೆ	5
11.	ಬಾಗಲಕೋಟೆ ಜಿಲ್ಲೆ	2
12.	ಉತ್ತರ ಕನ್ನಡ ಜಿಲ್ಲೆ	1